# “ ಪತ್ರಿಕಾ ಪ್ರಕಟಣೆ ”

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಗರ, ಹೊರವಲಯ, ಸಾಮಾನ್ಯ, ವೇಗದೂತ, ಅರೆ ಸುವಿಹಾರಿ ಮತ್ತು ರಾಜಹಂಸ ಬಸ್ಸುಗಳಲ್ಲಿ 60 ವರ್ಷ ಪೂರ್ಣಗೊಂಡಿರುವ ಹಾಗೂ ಅದಕ್ಕೂ ಹೆಚ್ಚಿನ ವಯಸ್ಸಿನ **ಕರ್ನಾಟಕ ರಾಜ್ಯದ** ಹಿರಿಯ ನಾಗರಿಕರಿಗೆ ಪ್ರಯಾಣ ದರದಲ್ಲಿ ಶೇ.25 ರಿಯಾಯಿತಿ ಸೌಲಭ್ಯ ಒದಗಿಸಲಾಗಿದೆ.

ಹಿರಿಯ ನಾಗರಿಕರಿಗೆ ಹೆಚ್ಚಿನ ಸೌಲಭ್ಯ ಒದಗಿಸಲು, ಕರ್ನಾಟಕ ರಾಜ್ಯದ ಹಿರಿಯ ನಾಗರಿಕರು ಈ ಕೆಳಕಂಡ ಯಾವುದಾದರೊಂದು ಗುರುತಿನ ಚೀಟಿಯನ್ನು ತೋರಿಸಿ ಟಿಕೆಟ್ ದರದಲ್ಲಿ ಶೇ.25 ರಷ್ಟು ರಿಯಾಯಿತಿಯನ್ನು ಪಡೆಯಬಹುದಾಗಿರುತ್ತದೆ.

- ಭಾರತ ಸರ್ಕಾರವು ವಿತರಿಸಿರುವ ಪಾಸ್‌ಪೋರ್ಟ್,
- ಚುನಾವಣಾ ಆಯೋಗದವರು ವಿತರಿಸಿರುವ ಗುರುತಿನ ಚೀಟಿ,
- ಹುಟ್ಟಿದ ದಿನಾಂಕ, ತಾರೀಖು, ವರ್ಷ ನಮೂದಿಸಿರುವ ಆಧಾರ್ ಕಾರ್ಡ್,
- ಚಾಲನಾ ಪರವಾನಗಿ (ಡ್ರೈವಿಂಗ್ ಲೈಸೆನ್ಸ್),
- ವಾಸಸ್ಥಳ ಹಾಗೂ ಹುಟ್ಟಿದ ದಿನಾಂಕವನ್ನು ನಮೂದಿಸಿರುವಂತಹ ಭಾರತ ಸರ್ಕಾರದ ಇಲಾಖೆ / ಸಾರ್ವಜನಿಕ ವಲಯದ ಘಟಕಗಳಿಂದ (PSU’s) ವಿತರಿಸಿರುವ ಗುರುತಿನ ಚೀಟಿ,
- ವಾಸಸ್ಥಳ ಹಾಗೂ ಹುಟ್ಟಿದ ದಿನಾಂಕವನ್ನು ನಮೂದಿಸಿರುವಂತಹ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಗುರುತಿನ ಚೀಟಿ (NREGA card),
- ಕರ್ನಾಟಕ ಸರ್ಕಾರದ ಯಾವುದೇ ಇಲಾಖೆಯಿಂದ ಅಥವಾ ಸಾರ್ವಜನಿಕ ವಲಯದ ಘಟಕ (PSU’s) / ಸಂಸ್ಥೆಯಿಂದ ವಿತರಿಸಿರುವ ಹುಟ್ಟಿದ ದಿನಾಂಕ, ವರ್ಷ ನಮೂದಿಸಿರುವ ಗುರುತಿನ ಚೀಟಿ,
- ಕರ್ನಾಟಕ ಸರ್ಕಾರದ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ನಿರ್ದೇಶನಾಲಯದವರು ವಿತರಿಸಿರುವ ಭಾವಚಿತ್ರವಿರುವ ಗುರುತಿನ ಚೀಟಿ (60 ವರ್ಷ ಪೂರ್ಣಗೊಂಡಿರುವ ಹಾಗೂ ಮೇಲ್ಪಟ್ಟ ಹಿರಿಯ ನಾಗರಿಕರಿಗೆ),
- ನಿಗಮದ ವತಿಯಿಂದ ವಿತರಿಸುವ ಗುರುತಿನ ಚೀಟಿ.

ಹಿರಿಯ ನಾಗರಿಕರ ಅನುಕೂಲಕ್ಕಾಗಿ ಸದರಿ ಮಾಹಿತಿಯನ್ನು ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಚಾರ ಮಾಡಲು ಕೋರಲಾಗಿದೆ.